ISSN: 2581-8511
Tumbe Group of International Journal
A Peer Reviewed Multidisciplinary Journal
Volume- 3
Issue-1
January-April: 2020

# ಅರಳವ್ವ ಕಾದಂಬರಿಯ ವಸ್ತು ಮತ್ತು ನಿರೂಪಣೆ.

**ಪುರುಷೋತ್ತಮ ಎನ್.ಆರ್.**
ಪಿಎಚ್.ಡಿ ಸಂಶೋಧನಾ ವಿದ್ಯಾರ್ಥಿ
ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-583276. Email: purushappu@gmail.com

**ಪ್ರಸ್ತಾವನೆ.**

'ಅರಳವ್ವ' ಕೃತಿಯು ಡಾ.ಹೆಬ್ಬಾಲೆ ಕೆ. ನಾಗೇಶ್ ಅವರ ಪ್ರಥಮ ಕಾದಂಬರಿಯಾಗಿದೆ. ಇದು ಹೆಬ್ಬಾಲೆಯ ಪ್ರಾದೇಶಿಕ ಭಾಷೆ, ನಿರೂಪಣಾ ಶೈಲಿ, ದಲಿತರ ಬದುಕು, ವರ್ಗ, ವರ್ಣ ವ್ಯವಸ್ಥೆಯ ಕಾರಣವಾಗಿ ಮಹತ್ವದ ಕಾದಂಬರಿಯಾಗಿದೆ. ಕಾದಂಬರಿಯಲ್ಲಿ ಪ್ರಸ್ತಾಪಿತವಾಗುವ ಕುಲ ಕಸುಬುಗಳು, ಸಾಂಸ್ಕೃತಿಕ ಸಂಗತಿಗಳು, ಜನಪದ ಆಚರಣೆಗಳು, ಸಾಮಾಜಿಕ ಜನ ಜೀವನ, ಅನೈತಿಕ ಸಂಬಂಧಗಳು, ಜಮೀನ್ದಾರಿ ಪದ್ಧತಿ, ಜೀತ ಪದ್ಧತಿಯ ಕರಾಳತೆಗಳು ಕಾದಂಬರಿಯಲ್ಲಿ ಮೂಡಿಬಂದಿವೆ. ಅರಳವ್ವ ಎಂಬ ದಲಿತ ಹೆಣ್ಣು ಮಗಳೊಬ್ಬಳ ಸುತ್ತಲು ಗಿರಕಿ ಹೊಡೆಯುವ ಕಾದಂಬರಿಯ ವಸ್ತು ಆಕೆಯು ತನ್ನ ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಒಡ್ಡುವ ಪ್ರತಿಸ್ಪರ್ಧೆಗಳ ಕಾರಣವಾಗಿ ಪ್ರಮುಖವಾಗುತ್ತದೆ. ಜೀವನ ಪ್ರೀತಿಯ ಸಾಕಾರ ಮೂರ್ತಿಯಾದ ಅರಳವ್ವ ಬದುಕನ್ನು ಕಟ್ಟಿಕೊಳ್ಳಲು ಪಡುವ ಕಷ್ಟಗಳು, ಹುಡುಕಿಕೊಳ್ಳುವ ಮಾರ್ಗೋಪಾಯಗಳು ಕಾದಂಬರಿಗೆ ಸಮರ್ಥ ವಸ್ತುವನ್ನು ಒದಗಿಸಿದೆ.

ಯಬ್ಬಾಲೆಯ ಕುಲ್ವಾಡಿಯಾದ ಸಿಂಗ್ರಿ ಮತ್ತು ಆತನ ಹೆಂಡತಿ ಮಲ್ಲಿ ಇವರ ಮಗನಾದ ಚಂಗನನ್ನು ಕೈ ಹಿಡಿದು ತನ್ನ ಬಾಳನ್ನು ಸಾಗಿಸಲು ಪ್ರಾರಂಭಿಸುವ ಅರಳವ್ವ ತನ್ನ ಹದಿನಾರನೆಯ ವಯಸ್ಸಿಗೆ ವಿಧವೆಯಾಗುತ್ತಾಳೆ. ಮಾಳದ ಹಬ್ಬದ ಕಾರಣವಾಗಿ ಒಂದು ಇರುಳು ಮೀನನ್ನು ಹಿಡಿಯಲು ಕೆರೆಗೆ ಹೋದ ಚಂಗ ಕೆರೆಯ ಉಸುಕಿನಲ್ಲಿ ಸಿಲುಕಿ ಸಾಯುತ್ತಾನೆ. ಜೀವನದ ಕಿರಿ ವಯಸ್ಸಿನಲ್ಲಿಯೇ ವೈಧವ್ಯದ ಕಳಂಕವನ್ನು ಹೊತ್ತು ಬದುಕುವ ಸೊಸೆಯ ದುಸ್ಥಿತಿಯನ್ನು ನೋಡಲಾಗದೆ ಸಿಂಗ್ರಿ ಮತ್ತು ಮಲ್ಲಿ ತಮ್ಮ ಇನ್ನೊಬ್ಬ ಮಗನಾದ 'ಮರಿದಂಡ' ನೊಂದಿಗೆ ಅರಳವ್ವನನ್ನು ಕೂಡಾವಳಿ ಮಾಡುತ್ತಾರೆ. ತಿಳುವಳಿಕೆ ಕಡಿಮೆ ಇರುವ ಮರಿದಂಡನನ್ನು ಕೂಡಾವಳಿಯಾದ ಅರಳವ್ವ ತನ್ನ ಬದುಕಿನ ಚುಕ್ಕಾಣಿಯನ್ನು ಹಿಡಿದು ಸಮರ್ಥವಾಗಿ ಮುನ್ನಡೆಯುತ್ತಾಳೆ. ಯಾವುದೇ ಟೀಕೆಗಳಿಗೆ, ಅಪಹಾಸ್ಯಗಳಿಗೆ ಕಿವಿ ಕೊಡದೆ ಛಲದಿಂದ ಬದುಕನ್ನು ಕಟ್ಟಿಕೊಳ್ಳುವ ಆಕೆಯ ಮನಸ್ಥಿತಿ ಕಾದಂಬರಿಗೆ ಜೀವ ಕಳೆಯನ್ನು ತಂದಿದೆ.

ಹೊಸ ಸಂಬಂಧಕ್ಕೆ ಒಳಪಟ್ಟ ಇಬ್ಬರೂ ಆರಂಭದ ದಿನಗಳಲ್ಲಿ ಮುಜುಗರದ ಬದುಕನ್ನು ಸಾಗಿಸಿದರೆ, ಅವರದೇ ಸಮುದಾಯದ ಜನರ ಕೊಂಕಿಲ ನುಡಿಗಳು ಆ ಮುಜುಗರದ ಗೋಡೆಯನ್ನು ಒಡೆಯುವಂತೆ ಪ್ರೇರೇಪಿಸುತ್ತವೆ. ಅರಳವ್ವ ಹಾಗೂ ಮರಿದಂಡ ತಮ್ಮ ಬದುಕಿನ ಗಾಡಿಯನ್ನು ಎಳೆಯಲು ಮಾನಸಿಕವಾಗಿ ಹಾಗೂ ದೈಹಿಕವಾಗಿ ಸಿದ್ಧರಾಗುತ್ತಾರೆ. ಮರಿದಂಡ ತಮಗಿರುವ ತುಂಡು ಭೂಮಿಯಲ್ಲಿ ಬೆವರು ಸುರಿಸಿ ದುಡಿದರೆ, ಅರಳವ್ವ ತನ್ನ ಹಿರಿ ಹೈದನನ್ನು ಕುಳ್ಳೇಗೌಡನ ಮನೆಯಲ್ಲಿ ಜೀತಕ್ಕಿರಿಸಿ ಹಣವನ್ನು ತಂದು ವ್ಯಾಪಾರ ಮಾಡಲು ತೊಡಗುತ್ತಾಳೆ. ಕುಕ್ಕೆಯಲ್ಲಿ ಸಂತೆಯಿಂದ ತಂದ ಕರಿಮೀನು, ಸೀಗಡಿ, ಉಪ್ಮೀನು, ಯಲ್ಯಡಿಕೆ, ಬಾಳೆಹಣ್ಣು, ಕಿತ್ಲೆಹಣ್ಣು ಮೊದಲಾದ ವಸ್ತುಗಳನ್ನು ಇಟ್ಟುಕೊಂಡು ಊರಿನ ಕೇರಿ ಕೇರಿಗಳಲ್ಲಿ ತಿರುಗುತ್ತ ವ್ಯಾಪಾರ ಮಾಡಿ ತನ್ನ ಬದುಕನ್ನು ಹಸನಾಗಿಸಿಕೊಳ್ಳುವುದು ಕಂಡುಬರುತ್ತದೆ. ಇದರ ನಡುವೆ ತನ್ನ ಇಬ್ಬರು ಗಂಡು ಮಕ್ಕಳು

ದಾಯಾದಿಗಳ ಕುತಂತ್ರಕ್ಕೆ ಕೊಲೆಯಾದರೂ, ಜೀವನದಲ್ಲಿ ಹೆದರದೆ ತನ್ನ ಹೆಣ್ಣು ಮಕ್ಕಳನ್ನೇ ಗಂಡು ಮಕ್ಕಳನ್ನಾಗಿ ಬೆಳೆಸಿ ಅವರಿಗೆ ಮದುವೆ ಮಾಡುತ್ತಾಳೆ. ತನ್ನ ಸಮುದಾಯದ ಎಲ್ಲರಿಗೂ ಬೆರಗು ಮೂಡಿಸುವಂತೆ ಬದುಕಿ ಇತಿಹಾಸವಾಗುವ 'ಅರಳಿ' ಯು 'ಅರಳವ್ವ' ಳಾಗುವ ಮೂಲಕ ತನ್ನ ಬದುಕಿನ ಸಾರ್ಥಕತೆಯನ್ನು ಕಾಣುತ್ತಾಳೆ. ಪುರುಷ ಪ್ರಧಾನ ವ್ಯವಸ್ಥೆಯೊಳಗೆ ಏಕಾಂಗಿ ಹೆಣ್ಣೊಬ್ಬಳು ತನ್ನ ಕಾಲ ಮೇಲೆ ನಿಂತು ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವ ವಸ್ತು ಕಾದಂಬರಿಗೆ ಹೊಸತನವನ್ನು ತಂದಿತ್ತಿರುವುದರ ಜೊತೆಗೆ ಕಾದಂಬರಿಯ ಮೌಲ್ಯವನ್ನು ಹೆಚ್ಚಿಸಿದೆ.

ಈ ಸಂಗತಿಗಳ ಜೊತೆಗೆ ಅಯ್ನೋರ ಹೆಂಡತಿಯಾದ ಶಾರದಮ್ಮ, ತಿಪ್ಪಿ, ತಿಪ್ಪಿಯ ಮೂಗಿ ಮಗಳು, ಪುಡ್ತಾಯಿ ಮೊದಲಾದ ಹಲವು ಹೆಣ್ಣುಗಳ ಮನದ ತಾಕಲಾಟಗಳನ್ನು ಹಿಡಿದಿಡುವಲ್ಲಿ ಸಹ ಕಾದಂಬರಿಯು ಯಶಸ್ವಿಯಾಗಿದೆ. ಇಲ್ಲಿ ಬದುಕಿಗಾಗಿ ಹಪಹಪಿಸುವ ತಿಪ್ಪಿಯಂತಹ ಅನಾಥ ಹಾಗೂ ನಿರ್ಗತಿಕ ಹೆಣ್ಣುಗಳನ್ನು ಅಯ್ನೋರು, ಗೌಡ್ರುಗಳಂತಹ ಉಳ್ಳವರು ಹೇಗೆ ತನ್ನ ತನ್ನ ಸ್ವಾರ್ಥಗಳಿಗೆ ಬಳಸಿಕೊಳ್ಳುವರು ಎಂಬುದನ್ನು ಯಾವುದೇ ಮುಲಾಜುಗಳಿಗೆ ಒಳಗಾಗದೆ ಕಾದಂಬರಿ ಓದುಗರ ಮುಂದೆ ಬಿಚ್ಚಿಡುವಲ್ಲಿ ಯಶಸ್ವಿಯಾಗಿದೆ. ಕಾದಂಬರಿಯಲ್ಲಿನ ಪ್ರತಿ ಪಾತ್ರಗಳೂ ಸಹ ತಮ್ಮ ವಿಶಿಷ್ಟ ವ್ಯಕ್ತಿತ್ವಗಳೊಂದಿಗೆ ಬೆಳೆದಿರುವುದು ಕಾದಂಬರಿಯ ಸತ್ವಯುತವಾದ ವಸ್ತುವಿನಿಂದ ಎಂಬುದನ್ನು ಗಮನಿಸಬೇಕು. ಇವೆಲ್ಲ ಪಾತ್ರಗಳೂ ಪೋಷಕವಾಗಿದ್ದರೂ ಅರಳವ್ವನ ಪಾತ್ರದ ಘನತೆಯನ್ನು ಹೆಚ್ಚಿಸುವಲ್ಲಿ ತಾವು ದುಡಿದಿರುವಂತೆ ಭಾಸವಾಗುತ್ತದೆ. ಕಾದಂಬರಿಯು ಜೀವನ ಪ್ರೀತಿಯ ಪಾತ್ರಗಳ ಜೊತೆಗೆ, ತಿಪ್ಪಿಯಂತಹ ವೇಶ್ಯೆಯನ್ನು, ಮಲ್ಲಿಯಂತಹ ಹಿರಿ ಜೀವದ ತಾಕಲಾಟಗಳನ್ನು, ಶಾರದಮ್ಮನಂತಹ ತಾಯ್ತನವನ್ನು ಬಯಸುವ ಹೆಣ್ಣುಗಳ ಮನದ ಬಯಕೆಗಳನ್ನು ಸಹ ಕಾದಂಬರಿಯು ತನ್ನ ವಸ್ತುವಾಗಿ ಇರಿಸಿಕೊಂಡಿರುವುದು ಕಾದಂಬರಿಯ ಹರಹನ್ನು ನಮಗೆ ಮನದಟ್ಟು ಮಾಡಿಕೊಡುತ್ತದೆ.

ಕಾದಂಬರಿಯು ತನ್ನ ವಿಶಿಷ್ಟ ನಿರೂಪಣಾ ಕ್ರಮದ ಕಾರಣವಾಗಿಯು ಸಹ ನಮ್ಮ ಗಮನವನ್ನು ಸೆಳೆಯುವಂತಹದ್ದಾಗಿದೆ. ಅಲ್ಲದೆ ಯಾವುದೇ ಸಾಹಿತ್ಯ ಕೃತಿಯಾದರೂ ಸಹ ಅದರ ನಿರೂಪಣೆ ಆ ಕೃತಿಗೊಂದು ವಿಶೇಷತೆಯನ್ನು ತಂದುಕೊಡುತ್ತದೆ. ಅಲ್ಲದೆ ವಸ್ತುವಿಗಿಂತ ನಿರೂಪಣೆಯಲ್ಲಿ ಇಡೀ ಕೃತಿಯ ಯಶಸ್ಸು ಅಡಗಿರುವುದು ಕಂಡುಬರುತ್ತದೆ. ಈ ಹಿನ್ನೆಯಲ್ಲಿ ಓದುಗರೂ ಸಹ ವಸ್ತುವಿನಂತೆಯೇ ಆ ಕೃತಿಯ ನಿರೂಪಣಾ ಕ್ರಮಗಳಿಗೂ ಸಹ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವುದು ತಿಳಿಯುತ್ತದೆ. ಹೀಗಾಗಿ ಅರಳವ್ವ ಕಾದಂಬರಿಯ ನಿರೂಪಣಾ ಕ್ರಮವು 'Flash back' ನ ತಂತ್ರಗಾರಿಕೆಯನ್ನು ಒಳಗೊಂಡಿದೆ. ಹೆಬ್ಬಾಲೆಯ ಪ್ರಾದೇಶಿಕ ಭಾಷೆಯು ಕಾದಂಬರಿಯ ಈ ನಿರೂಪಣಾ ಕ್ರಮಕ್ಕೆ ಮತ್ತಷ್ಟು ಗಟ್ಟಿತನವನ್ನು ನೀಡಿರುವುದಲ್ಲದೆ ಸೋಪಜ್ಞತೆಯಿಂದ ಕೂಡಿದ ಓದಿನ ಸೊಗಸನ್ನು ಹೊಂದಿದೆ. ಎಲ್ಲಿಯೂ ಓದಿನಲ್ಲಿ ನೀರಸವಾಗದಂತೆ ಕಾದಂಬರಿಯ ವಸ್ತುವನ್ನು ನಿರೂಪಿಸಿಕೊಂಡು ಹೋಗಿರುವ ಶೈಲಿ ಕುತೂಹಲಕಾರಿಯಾಗಿದೆ.

ಅಪ್ಪಟ ದೇಸೀ ಕಥನವಾಗಿ ಓದುಗರ ಗಮನವನ್ನು ಸೆಳೆಯುವ ಅರಳವ್ವ ಕಾದಂಬರಿಯು ಅರಳಮ್ಮನ ಕೈಯಂಚಿನ ಮನೆಯ ವರ್ಣನೆಯೊಂದಿಗೆ ಪ್ರಾರಂಭವಾಗಿ, ಕೊನೆಗೆ ಆ ಮನೆಯ ವಿವರಗಳನ್ನು ತಿಳಿಸುತ್ತಲೇ ಮುಕ್ತಾಯಗೊಳ್ಳುತ್ತದೆ. ಇದು ಕಾದಂಬರಿಗೆ ಹೊಸತನವನ್ನು ನೀಡಿರುವ ಜೊತೆಗೆ ಕ್ರಮಬದ್ಧವಾದ ನಿರೂಪಣಾ ಕ್ರಮದ ಸೊಗಸನ್ನು ಉಣಬಡಿಸುತ್ತದೆ. "ಅರಳಮ್ಮನ ಕೈಯಂಚಿನ ಮನೆ ಒಲಜೇರಿ ಕಡೇ ಬೀದಿಗಿತ್ತು. ಒಂದೊಂದು ತಾವ ಜಂಕಳಾಗಿ ಜಾರಿ ನೆಲ್ಕೆ ಬಿದ್ದ ವಡ್ಡ ಯಂಚುಗಳು ಚಲ್ಲಾಪಿಲ್ಲಿ ಆಗಿದ್ದೋ" ಎಂದು ಆ ಮನೆಯ ಸ್ಥಿತಿಗತಿಗಳನ್ನು ವಿವರಿಸುವ ಜೊತೆಗೆಯೇ "ಅಕ್ಕ ಪಕ್ಕದ ಊರ್ನೋರು, ನೆಂಟ್ರುಯತ್ತು ಕಡೆ ಬೀದಿಲಿರೊ ಸಡಕ್ರ ಮನ್ಗೆ ವಾಗ್‌ಬ್ಯಾಕಂದ್ರೆ ಅರಳಮ್ಮನ ಹಟ್ಟಿ ಮುಂದ್ಲೆಯ ವಾಗ್ಬೇಕಿತ್ತು. ವೋಗುವಾಗ ಅವ್ರುದು ಈಟೊಂದು ದೊಡ್ಮನೆಯಾ ! ಅಂತ ಉಸ್ರು ಮ್ಯಾಕು ಚಳಿಕು ಬುಡ್‌ತ್ತಿದ್ದು. 'ಇದು ನಮ್ಮವ್ರು ಅಟ್ಟಿಯಾ !' ನಾವ್ ಕಂಡಿತ್ತಿಲ್ಲ, ಬುಡು ಅತ್ಲಗಿ. ಇಸ್ಕೂಲ್ ಗಿಸ್ಕೂಲ್ ಅಂದ್ಕೊಂಡಿದ್ದೊ, ಆದ್ರೆ ಇದು ಮನೆ. ಅಟ್ಟಿ ಮುಂದೆ ನಿಂತ್ಕೊಂಡು 'ಯಣ್ ಯಂಗಸಾದ್ರೂವೆ ಯಂಗೆ ಗಟ್ಟಿಮುಟ್ಟಾಗಿ ಕಟ್ಟ್ಯಾವಳಲ್ಲಪಯ್ಯನೆ' ಅಂದ್ಕೊಂಡು ಗಂಡುಸ್ರು ಉಸ್ರು

ಇಡ್ಕೊಂಡಂಗೆ ಆಡೋರು. ಅಂತ್ರುವೆ ಒಂದು ಸಲ ಕತ್ನ ಅತ್ ಇತ್ಲಾಗಿ ಆಡಿಸ್ಸಿ ಮುಂದ್ಕೆ ಯಜ್ಜೆ ಇಡ್ತಿದ್ದು. ಸುತ್ ಮುತ್ಲ ಅಳ್ಳಿಲಿ ಇಂತ ಮನೆ ಇಲ್ಲಾ ಅಂತ ಅವ್ರುಗೆ ಅವ್ರೆಯ ಗುಸುಗುಸು ಅಂದ್ಕೊಂಡು ಮುಂದ್ಕೆ ವಾಗೋರು" ಎಂಬ ವಿವರಗಳು ಆ ಮನೆಯನ್ನು ನೋಡಿದವರ ಮನದಲ್ಲಿ ಮೂಡುವ ಭಾವನೆಗಳ ಹಾಗೂ ಯೋಚನಾ ಲಹರಿಗಳನ್ನು ತಿಳಿಸಿಕೊಡುತ್ತವೆ.

ಕಾದಂಬರಿಯಲ್ಲಿ ಉಲ್ಲೇಖಿತವಾಗುವ ಮಾಳದಬ್ಬದ ಪ್ರಸಂಗವು ಸಹ ಕಾದಂಬರಿಯ ನಿರೂಪಣೆಯೊಂದಿಗೆ ತಳುಕು ಹಾಕಿಕೊಂಡಿರುವುದು ತಿಳಿದುಬರುತ್ತದೆ. ಅಲ್ಲದೆ ಈ ಮಾಳದ ಹಬ್ಬದ ಜೊತೆಗೆ ಅರಳವ್ವನ ಏರು ಪೇರಿನ ಬದುಕು ಸಹ ಸಾಗುವುದು ತಿಳಿದುಬರುತ್ತದೆ. ಅಲ್ಲದೆ ಅಂತಿಮವಾಗಿ "ತಾನು ತನ್ನಟ್ಟಿನೂವೆ ಭೂಮಿ ಆಕಾಶ ಒಟ್ಟಿಗಾದಂತೆ ತನ್ನಟ್ಟೀಲಿ ಒಡಲಿನ ಜತ್ಗೆ ಬೆರ್ತಕೊಂಡಿದ್ದ ಜೀವಾಳ್ಗಳ ನೆಪ್ಪೀಲಿ ಜೀವ್ಸಗಳು ಉಳ್ತಿದ್ದೊ" ಎಂಬ ಸಾಲುಗಳ ಮೂಲಕ ಕಾದಂಬರಿಯು ಮುಕ್ತಾಯಗೊಳ್ಳುತ್ತದೆ. ತಾನು ಕಷ್ಟಪಟ್ಟು ಕಟ್ಟಿದ ತನ್ನಟ್ಟಿಯ ಮೇಲೆ ಅರಳಿಗೆ ಇನ್ನಿಲ್ಲದಂತಹ ಪ್ರೀತಿ, ಮಮಕಾರಗಳಿರುವುದು ಇದರಿಂದ ತಿಳಿಯುತ್ತದೆ.

ವಿಶ್ವದ ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಫೋಟಿಸುವ ವರ್ಗ, ವರ್ಣ ವ್ಯವಸ್ಥೆಗಳಂತೆಯೇ, ಅರಳವ್ವ ಕಾದಂಬರಿಯಲ್ಲಿನ ಸಾಮಾಜಿಕ ವ್ಯವಸ್ಥೆ ಕೂಡ ವರ್ಗ, ವರ್ಣ ವ್ಯವಸ್ಥೆಗಳ ಸ್ಫೋಟಗಳಿಂದ ಕೂಡಿದೆ. ತಾಯ್ತನದ ಹಂಬಲಗಳು, ಆತಂಕ, ನೋವು, ಬದುಕಿನ ಕ್ರೂರತೆಗಳು, ಬೀಭತ್ಸತೆ, ಉಳ್ಳವರ ದರ್ಪ, ನೊಂದವರ ನಿಟ್ಟುಸಿರು, ಅನ್ಯಾಯಕ್ಕೊಳಗಾದವರ ತಕರಾರುಗಳು, ಅಸಹಾಯಕ ಜೀವಿಗಳ ಬಿಕ್ಕಳಿಕೆಗಳು, ಅವರ ದುಃಖ, ಹಿಂಸೆ, ಬಡತನ, ಹಸಿವು, ಕ್ರೌರ್ಯ, ದಾರಿದ್ರ್ಯದಂತಹ ವಸ್ತುಗಳು ಕಾದಂಬರಿಯಲ್ಲಿ ಸಮರ್ಥವಾಗಿ ನಿರೂಪಿತವಾಗಿವೆ. ಇವೆಲ್ಲವುಗಳನ್ನು ಮುಖಾಮುಖಿಯಾಗಿಸುವ ಮೂಲಕ ಅರಳವ್ವ ತನ್ನ ಬದುಕನ್ನು ಕಟ್ಟಿಕೊಂಡು ಗಟ್ಟಿಯಾಗಿ ನೆಲೆ ನಿಲ್ಲುವ ಸಂಗತಿಗಳು ಓದುಗರ ಸ್ಮೃತಿಯಲ್ಲಿ ಅಚ್ಚಳಿಯದಂತೆ ಉಳಿಯುತ್ತವೆ.

ಗ್ರಾಮ್ಯ ಭಾಷೆಯಲ್ಲಿ ನಿರೂಪಿತವಾಗಿರುವ ದಲಿತ ಬದುಕು, ಅವರ ಬವಣೆಗಳು ಕಾದಂಬರಿಯ ನಿರೂಪಣಾ ಕ್ರಮದ ಮತ್ತೊಂದು ಮಜಲುಗಳಾಗಿವೆ. ಕಾದಂಬರಿಯಲ್ಲಿ ಬಳಕೆಯಾಗುವ ಗಾದೆ, ನುಡಿಗಟ್ಟುಗಳು, ಬೈಗುಳಗಳು, ನಾಟಕೀಯ ರೀತಿಯ ಸಂಭಾಷಣೆಗಳು ಸಹ ಕಾದಂಬರಿಯ ನಿರೂಪಣಾ ಕ್ರಮಕ್ಕೆ ಸಾಕ್ಷಿಯಾಗಿವೆ. ಅಲ್ಲದೆ ಜಮೀನ್ದಾರಿ ವ್ಯವಸ್ಥೆಯು ಸಮಾಜದ ಸಾಂಸ್ಕೃತಿಕ ಬದುಕಿನಲ್ಲಿ ಹೊಂದಿರುವ ಹಿಡಿತ ಹಾಗೂ ಪ್ರಭಾವಗಳನ್ನು ದೇಶಿ ಸೊಗಡಿನಲ್ಲಿ ನಿರೂಪಿಸಿರುವ ಕಾದಂಬರಿಯು ಅಲ್ಲಿ ಜನ ಜೀವನದ ಉಸಿರುಗಟ್ಟಿದ ಬದುಕನ್ನು ಅನಾವರಣಗೊಳಿಸಿದೆ. ಅರಳವ್ವನ ಪಾತ್ರದ ಮೂಲಕ ಕಾದಂಬರಿಯು ವ್ಯಕ್ತಪಡಿಸುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಳಕಳಿಗಳು ಕಾದಂಬರಿಯ ಮೌಲ್ಯ ಪ್ರಜ್ಞೆಯನ್ನು ಮನಗಾಣಿಸುತ್ತವೆ. ಹೀಗಾಗಿ ಅರಳವ್ವ ಬದುಕಿನ ಸ್ಥಿತ್ಯಂತರಗಳು ಆ ಮೌಲ್ಯಗಳಿಗೆ ಒಂದು ಸ್ಪಷ್ಟವಾದ ರೂಪುರೇಷೆಯನ್ನು ಒದಗಿಸಿದ್ದು, ಹೋರಾಟದ ಬದುಕುಗಳಿಗೆ ದಾರಿ ದೀಪವಾಗಿದೆ.

**ಉಪಸಂಹಾರ.**

ಅಸ್ಪೃಶ್ಯತೆಯಂತಹ ಕರಾಳತೆಗಳನ್ನು ತಿಳಿಯಪಡಿಸುವ ಕಾದಂಬರಿ ಅದರ ಕದಂಬ ಬಾಹುವಿನ ದರ್ಶನವನ್ನು ಮಾಡಿಸುತ್ತದೆ. ದಲಿತರಿಗೆ ಕಾಪಿ ನೀರನ್ನು ಚಿಪ್ಪಲ್ಲಿ ಉಯ್ದು ಕೊಡುವ ಲಿಂಗಾಯತ ಬೋಜಣ್ಣನ ಹೋಟೆಲ್ಲಿನ ಪ್ರಸಂಗದಲ್ಲಿ ಹಾಗೂ ಸಣ್ಣ, ಚೂಡ, ಕಾಳ, ಉದ್ದೂರರು ಪುಟ್ಟಣ್ಣನ ಹೆಂಡದಂಗಡಿಯ ಬಳಿ ಬಂದು ಕುಡಿಯುವ ಸಂದರ್ಭಗಳು ಅಸ್ಪೃಶ್ಯತೆಯ ಇನ್ನಷ್ಟು ವಿವರಗಳನ್ನು ಬಿಚ್ಚಿಡುತ್ತವೆ. ಕಷ್ಟಪಟ್ಟು ದುಡಿದರೂ, ತಮ್ಮ ಹೊಟ್ಟೆಯ ಹಸಿವನ್ನು ಇಂಗಿಸಿಕೊಳ್ಳುವಷ್ಟು ಆಹಾರವಿಲ್ಲದಿರುವುದು ಹಾಗೂ ತಮ್ಮ ಆಸೆಗಳನ್ನು ಈಡೇರಿಸಿಕೊಳ್ಳಲಾಗದ ಹೀನಾಯ ಪರಿಸ್ಥಿತಿ ದಲಿತರದ್ದಾಗಿರುವುದನ್ನು ಕಾದಂಬರಿ ಎಳೆ ಎಳೆಯಾಗಿ ಬಿಚ್ಚಿಟ್ಟಿದೆ. ಹೀಗಾಗಿ ಕುಡಿತ, ಹಾದರತನಗಳು, ಜೀತ, ಗುಲಾಮತನಗಳಂತಹ ಸಂಗತಿಗಳೂ ಸಹ ಕಾದಂಬರಿಯ ವಸ್ತುಗಳಾಗಿದ್ದು, ದಲಿತರ ದಾರುಣ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ.

**ಪರಾಮರ್ಶನ ಗ್ರಂಥಗಳು.**

[1] ಡಾ.ಹೆಬ್ಬಾಲೆ ಕೆ.ನಾಗೇಶ್, ಅರಳವ್ವ, 2006, ರುಚಿರ ಪ್ರಕಾಶನ, ಎಂ.ಪಿ.ಪ್ರಕಾಶ್ ನಗರ, ಹೊಸಪೇಟೆ-583201.